

ಸಾವಿತ್ರಿ ದೇವಿಗೆ ಸಮರ್ಪಿಸಲಾಗಿದೆ.

ರತ್ನಗಿರಿ ಗುಡ್ಡದ ಮೇಲೆ ಅರಣ್ಯದ ಮಧ್ಯದಲ್ಲಿ ಸಾವಿತ್ರಿ ದೇವಿಯ ಮತ್ತೊಂದು ದೇವಸ್ಥಾನವೂ ಇದೆ. ಇಲ್ಲಿ ಸಾವಿತ್ರಿ ದೇವಿ ಬ್ರಹ್ಮನ ಜೊತೆ ಮುನಿಸಿಕೊಂಡು ಈ ಸ್ಥಳದಲ್ಲೇ ನೆಲೆಸಿದ್ದಳು. ಈ ಬೆಟ್ಟ ಬ್ರಹ್ಮ ದೇವಸ್ಥಾನದ ಹಿಂಭಾಗದಲ್ಲಿದೆ. ಇದನ್ನು ತಲುಪಲು ಅರಣ್ಯದ ಮಧ್ಯದಿಂದ 1 ಗಂಟೆಯ ದಾರಿ ಕ್ರಮಿಸಬೇಕು. ಅಜ್ಮೀರ್‌ನಲ್ಲಿಯ ದರ್ಗಾ ಕೂಡ ವಿಶ್ವಪ್ರಸಿದ್ಧಿ ಪಡೆದಿದೆ.

ಸಾಕಷ್ಟು ವಿಶೇಷಗಳಿಂದ ಕೂಡಿದ ಪುಷ್ಕರ್, ಜಾತ್ರೆ ಹಾಗೂ ಹಬ್ಬಗಳಿಗೆ ಹೆಸರುವಾಸಿ. 'ಪುಷ್ಕರ್ ಮೇಳ'ವು ಭಾರತದ ಹಳೆಯ ಮೇಳಗಳಲ್ಲಿ ಒಂದಾಗಿದೆ. ಇಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಕಾಣಬಹುದಾಗಿದೆ.

## ಒಂಟೆಗಳ ಜಾತ್ರೆ

'ಪುಷ್ಕರ್‌ಮೇಳ' ಎನ್ನುವ ಹೆಸರಿನಿಂದ ಪ್ರಸಿದ್ಧಿ ಹೊಂದಿರುವ ಈ ಮೇಳವನ್ನು ಕಾರ್ತೀಕ ಹುಣ್ಣಿಮೆಯಂದು ಆಚರಿಸಲಾಗುತ್ತದೆ. ಇದರ ಜೊತೆಗೆ ಒಂಟೆಗಳ ಜಾತ್ರೆಯೂ ಕೂಡ ವಿಶ್ವಪ್ರಸಿದ್ಧವಾಗಿದೆ. ಸುಮಾರು 50 ಸಾವಿರ ಒಂಟೆಗಳನ್ನು ರಾಜಸ್ಥಾನದ ಬೇರೆ ಬೇರೆ ಪ್ರಾಂತದಿಂದ ಇಲ್ಲಿಗೆ ತಂದು ಮಾರಲಾಗುತ್ತದೆ. ಜನರು ಈ ಮೇಳಕ್ಕೆ ತಮ್ಮ ತಮ್ಮ ಒಂಟೆಗಳನ್ನು ಸುಂದರವಾಗಿ ಅಲಂಕರಿಸಿ ಕರೆದುಕೊಂಡು ಬರುತ್ತಾರೆ. ಈ ಮೇಳದಲ್ಲಿ ಒಂಟೆಗಳ ಸೌಂದರ್ಯ ಸ್ಪರ್ಧೆ ಹಾಗೂ ನೃತ್ಯವನ್ನು ಆಯೋಜಿಸಲಾಗುತ್ತದೆ.

ವಿಶ್ವದಲ್ಲೇ ಅತೀ ದೊಡ್ಡ ದನಗಳ ಜಾತ್ರೆಯಾದ 'ಪುಷ್ಕರ್ ಕ್ಯಾಟಲ್ ಫೇರ್' ಇದೇ ಸಂದರ್ಭದಲ್ಲಿ ನಡೆಸಲಾಗುತ್ತದೆ. ಈ ಮೇಳದಲ್ಲಿ ಹಾಡುಗಾರರು, ಜಾದೂಗಾರರು ಪಾಲ್ಗೊಳ್ಳುತ್ತಾರೆ. ಈ ಬಾರಿ ಪುಷ್ಕರ್‌ಮೇಳವು ನ. 15ರಿಂದ 23ರವರೆಗೆ ನಡೆಯಲಿದೆ. ಪುಷ್ಕರ್ ಉತ್ಸವದ ಸಮಯದಲ್ಲಿ ನಡೆಯುವ 'ಪುಷ್ಕರ್ ಬಜಾರ್' ರಾಜಸ್ಥಾನದ ಸಂಸ್ಕೃತಿಯನ್ನು ಪ್ರದರ್ಶಿಸುತ್ತದೆ ಎಂದರೆ ತಪ್ಪಾಗಲಾರದು. ರಾಜಸ್ಥಾನದ ಸುತ್ತಮುತ್ತಲಿನ ಪ್ರಾಂತದಿಂದ ಬರುವ ಕುಶಲಕರ್ಮಿಗಳಿಂದ ವಸ್ತುಪ್ರದರ್ಶನಗಳು ನಡೆಯುತ್ತವೆ. ಈ ಉತ್ಸವದಲ್ಲಿ ರಾಜಸ್ಥಾನಿ ಸ್ಪೆಷಲ್ ಸಿಹಿತಿಂಡಿಗಳಾದ ಘೇವರ್, ಅಜ್ಮೀರಿ ಕಲಾಕಂದ್, ಮಾಲಪೊವಾ, ಕೇಸರಿ ಮೀಟಾ ಚಾವಲ್, ಮುಂಗದಾಲ್ ಹಲವಾ, ಚುರಮಾ ಲಾಡು, ರಬಡಿ ಮುಂತಾದವುಗಳನ್ನು ಸವಿಯಬಹುದಾಗಿದೆ. ದೇಶ ವಿದೇಶಗಳಿಂದ ಜನರು ಈ ಮೇಳದಲ್ಲಿ ಭಾಗಿಯಾಗಲು ಸಹಸ್ರ ಸಂಖ್ಯೆಯಲ್ಲಿ ಆಗಮಿಸುತ್ತಾರೆ.

ತಲಪುವ ಮಾರ್ಗ: ಪುಷ್ಕರಕ್ಕೆ ಬರಲು ದೆಹಲಿ, ಜೈಪುರ, ಆಗ್ರಾದಂತಹ ಪ್ರಮುಖ ನಗರಗಳಿಂದ ಬಸ್‌ಗಳ ವ್ಯವಸ್ಥೆ ಇದೆ. ಸಮೀಪದ ರೈಲು ನಿಲ್ದಾಣ, ಅಜ್ಮೀರ್‌ನಲ್ಲಿದೆ. ವಿಮಾನದ ಮೂಲಕವೂ ಇಲ್ಲಿಗೆ ಬರಬಹುದು. ಜೈಪುರ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಇಲ್ಲಿಗೆ ಸಮೀಪದಲ್ಲಿದೆ. ಚಳಿಗಾಲವು ಪುಷ್ಕರ್‌ಗೆ ಭೇಟಿ ನೀಡಲು ಸೂಕ್ತವಾದ ಕಾಲ.